ಎಂಟು ವರ್ಷದ ಲಕ್ಷ್ಮೀ (ಹೆಸರು ಬದಲಿಸಲಾಗಿದೆ) ಕುಟುಂಬದಲ್ಲಿ ಒಬ್ಬಳೇ ಮಗಳು. ಮೊದಲು ತಂದೆಗೆ ಕೊರೊನಾ ಸೋಂಕು ಖಚಿತವಾಯಿತು. ಹಿಂದೆಯೇ ತಾಯಿಯೂ ಸೋಂಕಿಗೀಡಾದಳು. ವೈದ್ಯರ ಸಲಹೆಯಂತೆ ಅವರಿಬ್ಬರೂ ಮನೆಯಲ್ಲಿರುವ ಎರಡು ಕೋಣೆಗಳಲ್ಲಿ ಪ್ರತ್ಯೇಕವಾಗಿದ್ದಾರೆ (ಹೋಮ್ ಕ್ವಾರಂಟೈನ್). ಪೋಷಕರನ್ನು ನೋಡಿಕೊಳ್ಳುವ ಹೊಣೆ ಈಗ ಪುಟ್ಟ ಬಾಲಕಿ ಲಕ್ಷ್ಮೀ ಮೇಲೆ ಬಿದ್ದಿದೆ. ಅವಳ ಬದುಕೀಗ ಅಡುಗೆ ಮನೆ ಮತ್ತು ಹಜಾರದಲ್ಲಿಯಷ್ಟೆ. ತಾಯಿ ಜೋರಾಗಿ ಹೇಳುವ ನಿರ್ದೇಶನಗಳಂತೆ ಅಡುಗೆ, ಕಾಫಿ, ನೀರು ಕಾಯಿಸಿ ಕೊಡಬೇಕು. ಮನೆಗೆ ಬೇರೆ ಯಾರೂ ಬರುತ್ತಿಲ್ಲ. ವೈದ್ಯರು ಫೋನ್ ಮೂಲಕ ಹೇಳುವ ಮಾತಿನಂತೆ ನಡೆದುಕೊಳ್ಳಬೇಕು. ಮನೆಯಲ್ಲಿ ಟೀವಿ ಇದೆ. ಆದರೆ ಅದು ಅಪ್ಪನಿರುವ ಕೋಣೆಯಲ್ಲಿದೆ. ಅವಳೀಗ ಒಂಟಿ, ವಿಪರೀತ ಜವಾಬ್ದಾರಿ. ಲಕ್ಷ್ಮೀ ತುಂಬಾ ಬಳಲಿದ್ದಾಳೆ.

***

ಐದು ವರ್ಷದ ಕಾವೇರಿ ತನ್ನ ಹುಟ್ಟಿನೊಂದಿಗೇ ತಾಯಿಯನ್ನು ಕಳೆದುಕೊಂಡವಳು. ತಂದೆ ಇನ್ನೊಂದು ಮದುವೆಯಾದರು. ಬೆಂಗಳೂರಿನ ಪುಟ್ಟ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಕಾವೇರಿಯ ತಂದೆ ಕಳೆದ ತಿಂಗಳು ಕೊರೊನಾ ಸೋಂಕಿತರಾದರು. ಉಸಿರಾಟದ ತೊಂದರೆ ಕಾಣಿಸಿಕೊಂಡು, ಆಸ್ಪತ್ರೆಗೆ ಬೆಡ್ ಸಿಗದೆ ಅಲೆದಾಡಬೇಕಾಯ್ತು. ಅಂತೂ ಇಂತು ಪ್ರತಿಷ್ಠಿತ ಆಸ್ಪತ್ರೆಯೊಂದರಲ್ಲಿ ಬೆಡ್ ಸಿಕ್ಕಿತು. ಆದರೆ ಚಿಕಿತ್ಸೆ? ಕಾಳಸಂತೆಯಲ್ಲಿ ಲಕ್ಷಾಂತರ ರೂಪಾಯಿ ಕೊಟ್ಟು ರೆಮ್‌ಡಿಸಿವಿರ್ ಚುಚ್ಚುಮದ್ದು ಕೊಡಿಸಿಯೂ ಅವರು ತೀರಿಕೊಂಡರು. ಅವರನ್ನು ಮಣ್ಣುಮಾಡಲೂ ಯಾರೂ ಇರಲಿಲ್ಲ. ಕಾವೇರಿಯ ಪೋಷಣೆಯ ಜವಾಬ್ದಾರಿ ಹೊತ್ತುಕೊಳ್ಳಲು, ಅವಳ ಮಲತಾಯಿಯೂ ಸೇರಿ ಯಾರೂ ಮುಂದೆ ಬರುತ್ತಿಲ್ಲ...

***

ಕೋವಿಡ್‌ನಿಂದಾಗಿ ಆಸ್ಪತ್ರೆಯೊಂದರಲ್ಲಿ ಒಂದೂವರೆ ವರ್ಷದ ಮಗುವಿದ್ದ ಚಿಕ್ಕವಯಸ್ಸಿನ ತಾಯಿತಂದೆಯರಿಬ್ಬರೂ ಒಂದೆರಡು ದಿನಗಳ ಹಿಂದೆ ಮುಂದೆ ನಿಧನರಾದರು. ಮೂರ್ನಾಲ್ಕು ದಿನಗಳಾದರೂ ರೋಗಿಗಳ ಸಂಬಂಧಿಗಳಾರೂ ಆಸ್ಪತ್ರೆಗೆ ಬಂದಿರಲಿಲ್ಲ. ಈ ಮಗುವನ್ನೇನು ಮಾಡಬೇಕು ಎಂಬುದು ಆಸ್ಪತ್ರೆಯಲ್ಲಿ ಯಾರಿಗೂ ತಿಳಿಯದು. ಕೊನೆಗೆ ಯಾರದೋ ಸಲಹೆಯಂತೆ ಆ ಮಗುವನ್ನು ಯಾರಿಗಾದರೂ ದತ್ತು ಕೊಡಲು ನಿರ್ಧರಿಸಿ ಆಸ್ಪತ್ರೆ ಪ್ರಕಟಣೆ ಹೊರಡಿಸಿತು.

***

ಇವು ಕೋವಿಡ್ ಎಂಬ ರಕ್ಕಸಕಾಯಿಲೆಯ ಪಾದದಡಿಗೆ ಸಿಲುಕಿದ ಬದುಕುಗಳ ಕೆಲವು ಛಿದ್ರ ಚಿತ್ರಗಳಷ್ಟೆ. ಇಂಥ ನೂರಾರು ದಾರುಣ, ಹೃದಯವಿದ್ರಾವಕ ಘಟನೆಗಳು ಪ್ರತಿದಿನವೂ ನಡೆಯುತ್ತಿರುವ ನಿತ್ಯನರಕವೊಂದು ನಮ್ಮ ಸುತ್ತಲೂ ಮೈದಾಳಿದೆ. ಈ ನರಕದ ನಡುವೆಯೇ ದ್ವೀಪದ ಹಾಗೆ ಎಲ್ಲದರಿಂದ ಸಂಪರ್ಕ ಕಡಿತಗೊಳಿಸಿಕೊಂಡು ಬದುಕುತ್ತಿದ್ದರೂ, ವಾಟ್ಸ್‌ಆ್ಯಪ್‌ಗಳು, ಫೇಸ್‌ಬುಕ್ ಮತ್ತಿತರ ಜಾಲತಾಣಗಳು, ಮಾಧ್ಯಮಗಳು ಇಂಥ ನೂರಾರು ಘಟನೆಗಳನ್ನು ನಮ್ಮ ಕಣ್ಣು ಕಿವಿಗಳಿಗೆ ತಂದು ಸುರಿದು, ನಮ್ಮೊಳಗಿನ ಮಾನವೀಯತೆಯ ಸೆಲೆಯನ್ನು ಅಣಕಿಸುತ್ತಿವೆ.

ಕೊರೊನಾ ಎರಡನೇ ಅಲೆ ಸೃಷ್ಟಿಸಿದ ದುರಂತ ಅಂದಾಜಿಸಲೂ ಸಾಧ್ಯವಿಲ್ಲದಷ್ಟು ಭೀಕರವಾಗಿದೆ. ಬೆಡ್ ಸಿಗದೆ ರಸ್ತೆಯಲ್ಲಿ ಸಾಯುತ್ತಿರುವವರು, ಆಮ್ಲಜನಕವಿಲ್ಲದೇ ಬೆಡ್‌ನಲ್ಲಿ ಸಾಯುತ್ತಿರುವವರು, ಸ್ಮಶಾನದಲ್ಲಿ ಹೆಣ ಸುಡಲೂ ಸರತಿ ನಿಲ್ಲುತ್ತಿರುವವರು, ಕಾಳಸಂತೆಯಲ್ಲಿ ದಂಧೆಗಿಳಿದಿರುವವರು... ಹೀಗೆ ಈ ನರಕದ ಪ್ರತ್ಯಕ್ಷಚಿತ್ರಗಳು ಒಂದೆಡೆಯಾದರೆ, ಕಣ್ಣಿಗೆ ಕಾಣದಂಥ ಘೋರ ಪರಿಣಾಮಗಳದ್ದು ಬೇರೆಯದೇ ಅಧೋಜಗತ್ತು. ಈ ಕಾಯಿಲೆಯನ್ನು ಹಿಮ್ಮೆಟ್ಟಿಸಲು ಮನುಷ್ಯ ನಡೆಸುತ್ತಿರುವ ಪ್ರಯತ್ನಕ್ಕೆ ಇಂದಲ್ಲಾ ನಾಳೆ ಯಶ ಸಿಗಬಹುದು. ಆದರೆ ಈಗಾಗಲೇ ಅದು ಮನುಕುಲಕ್ಕೆ ಮಾಡಿರುವ, ಮಾಡಲಿರುವ ಗಾಯ ಮಾಯುವುದು ಅಷ್ಟು ಸುಲಭವಲ್ಲ. ಅದರ ನೋವನ್ನು ಇನ್ನೂ ಎಷ್ಟೋ ಕಾಲ ನಾವು ಹೊತ್ತು ತಿರುಗಲೇಬೇಕಾಗುತ್ತದೆ. ಆ ಗಾಯ ಕೀವುಗಟ್ಟದ ಹಾಗೆ, ಇತರ ಅಂಗಗಳಿಗೂ ಹಬ್ಬದ ಹಾಗೆ, ಅಂಗ ಊನ ಮಾಡದ ಹಾಗೆ ಜಾಗರೂಕವಾಗಿ ವಾಸಿಮಾಡಿಕೊಳ್ಳಬೇಕಾದ ಅಗತ್ಯವೂ ಇದ್ದೇ ಇದೆ.

'ಕೊರೊನಾ ಅನಾಥರು' ಎಂಬುದು ಇಂಥ ಒಂದು ದೀರ್ಘಕಾಲೀನ ಪರಿಣಾಮ ಬೀರುವ ಗಾಯದ ಹೆಸರು. ಕೋವಿಡ್ ದಾಳಿಯಲ್ಲಿ ತಂದೆ ತಾಯಿಯನ್ನು ಕಳೆದುಕೊಂಡ ಮಕ್ಕಳನ್ನು ಹಾಗೆಂದು ಕರೆಯಲಾಗುತ್ತದೆ. 'ಕೊರೊನಾ ಅನಾಥರು' ಎನ್ನುವ ಮಾತು ಅಮಾನವೀಯವಾಗಿ ಕೇಳಿಸುತ್ತದಾದರೂ, ಅದು ಒಪ್ಪಿಕೊಳ್ಳಲೇ ಬೇಕಾದ ವಾಸ್ತವ. ಕೊರೊನಾ ಮೊದಲ ಅಲೆ ಬಂದಾಗಲೇ ಇಂಥದ್ದೊಂದು ನುಡಿಗಟ್ಟು ಚಾಲ್ತಿಗೆ ಬಂದಿತ್ತು. ಬರಲೇಬೇಕಾದ ದಯನೀಯ ಪರಿಸ್ಥಿತಿ



ನಿರ್ಮಾಣವಾಗಿತ್ತು. ಈ ವರ್ಷ ಆ ಸಮಸ್ಯೆ ಇನ್ನಷ್ಟು ಹಬ್ಬಿದೆ. ಈ ಸಮಸ್ಯೆಯ ಹಲವು ಆಯಾಮಗಳು ಈಗಾಗಲೇ ನಮ್ಮೆದುರು ಕಾಣಿಸಲು ತೊಡಗಿವೆ. ಮೇಲೆ ಉಲ್ಲೇಖಿಸಿದ್ದು ಅದರ ಮೂರು ಮುಖಗಳಷ್ಟೇ.

ಈ ಲೇಖನ ಬರೆಯುವ ಹೊತ್ತಿಗೆ ಭಾರತದಲ್ಲಿ ಅತ್ಯಧಿಕ ಸಂಖ್ಯೆಯ ಕೊರೊನಾ ವೈರಸ್ ಸೋಂಕಿತರು 21ರಿಂದ 60 ವರ್ಷದೊಳಗಿನವರು ಎಂದು ಕಂಡುಬರುತ್ತಿದೆ. ಅದರಲ್ಲೂ ಒಟ್ಟು ಸೋಂಕಿತರಲ್ಲಿ 21ರಿಂದ 40 ವರ್ಷದೊಳಗಿನವರೇ ಪ್ರತಿಶತ 45ರಷ್ಟು ಎಂಬುದು ಆಘಾತಕಾರಿ ಅಂಶ. ದುಡಿದು ಸಂಪತ್ತನ್ನು ಬೆಳೆಸುವ ಚೈತನ್ಯವಿರುವ, ಸಂಪಾದಿಸಿ ಕುಟುಂಬಗಳನ್ನು ನಿರ್ವಹಿಸುತ್ತಿರುವ ವಯೋಮಾನದವರು ರೋಗದಿಂದ ಬಳಲಿ ನಿಧನರಾಗುತ್ತಿರುವರೆಂದು ದಿನೇ ದಿನೇ ಕೇಳಿಬರುತ್ತಿರುವ ಸುದ್ದಿಗಳು ಆತಂಕ ಹುಟ್ಟಿಸುತ್ತಿವೆ. ಇವರಲ್ಲಿ ಬಹುತೇಕರು ಚಿಕ್ಕವಯಸ್ಸಿನ ತಾಯಿ ತಂದೆಯರು. ಇನ್ನೂ ಹಸುಗೂಸುಗಳು ಅಥವಾ ಬೆಳೆಯುತ್ತಿರುವ ಮಕ್ಕಳ ಪೋಷಕರು. ಇಂಥವರ ಹಠಾತ್ ಸಾವಿನ ಪರಿಣಾಮವಾಗಿ ಅವರ ಮಕ್ಕಳು ಅನಾಥರಾಗುತ್ತಾರೆಯೆ? ಬೀದಿಗೆ ಬೀಳುತ್ತಾರೆಯೆ? ಮುಂದೆ ಈ ಮಕ್ಕಳ ಗತಿ ಏನು? ಇಂಥ ಪ್ರಶ್ನೆಗಳು

> **ಕೊರೊನಾ ಎರಡನೇ ಅಲೆ ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ತೋರಿಸುತ್ತಿದೆ. ಮೊದಲ ಅಲೆಯ ಬೆನ್ನಲ್ಲೇ ಇಂತಹದೊಂದು ತೀವ್ರತೆಯನ್ನು ಮೊದಲೇ ಮನಗಂಡು, ಅಗತ್ಯವಿರುವ ತಯಾರಿಗಳನ್ನು ಮಾಡಬೇಕಿತ್ತು**
>
> **-ವಿಕ್ಟರ್ ಟಾರೋ**, ಇಂಡಿಯಾ ಲಿಟರಸಿ ಪ್ರಾಜೆಕ್ಟ್

